# ಸಂಭಾವ್ಯ ನಷ್ಟ ಮತ್ತು ಪ್ರತಿಫಲ

ಹಣಕಾಸು ಸಾಕ್ಷರತಾ ಸಪ್ತಾಹ
ಜೂನ್ 4–8, 2018



ರಾತ್ರೋರಾತ್ರಿ ಶ್ರೀಮಂತರಾಗಬಹುದೆಂದು ನೀವು ಯೋಚಿಸುತ್ತಿರಾ?

ಕಡಿಮೆ ಕಾಲಾವಧಿಯಲ್ಲಿ ನೀವು ಅತಿ ಹೆಚ್ಚು ಪ್ರತಿಫಲ ಪಡೆಯಬಹುದೆಂದು ನಿಮಗೆ ಅನಿಸುತ್ತದೆಯೇ?

ಎಚ್ಚರಿಕೆಯಿಂದ ಯೋಚಿಸಿ, ಯಾಕೆಂದರೆ ಅತಿ ಹೆಚ್ಚು ಪ್ರತಿಫಲದ ನಿರೀಕ್ಷೆ ಅತಿ ಹೆಚ್ಚಿನ ಸಂಭಾವ್ಯ ನಷ್ಟ ಹೊಂದುವುದನ್ನೂ ಒಳಗೊಂಡಿರುತ್ತದೆ.

## ಮೂಲ ತತ್ವ

ಹಣಕಾಸು ಉತ್ಪನ್ನಗಳಲ್ಲಿ ಹೂಡಿಕೆ ಅಥವಾ ಉಳಿತಾಯ ಮಾಡುವಾಗ ನಷ್ಟ ಸಂಭಾವ್ಯತೆ ಮತ್ತು ಪ್ರತಿಫಲಗಳ ನಡುವಿನ ಆಯ್ಕೆಯನ್ನು ಗಮನದಲ್ಲಿರಿಸಿಕೊಳ್ಳುವುದು ಮೂಲ ಹೂಡಿಕೆ ತತ್ವ. ಅತಿ ಹೆಚ್ಚು ಪ್ರತಿಫಲದ ನಿರೀಕ್ಷೆ ಅತಿ ಹೆಚ್ಚಿನ ಸಂಭಾವ್ಯ ನಷ್ಟವನ್ನೂ ಸಂಭವನೀಯ ನಷ್ಟ ಸಾಧ್ಯತೆಯನ್ನೂ ಒಳಗೊಂಡಿರುತ್ತದೆ.

## ತಕ್ಕ ಜಾಗರೂಕತೆ

ಕಡಿಮೆ ಅವಧಿಯಲ್ಲಿ ನಿಶ್ಚಿತ ಅಥವಾ ಅತಿ ಹೆಚ್ಚು ಪ್ರತಿಫಲಗಳ ಭರವಸೆ ನೀಡುವ ಅನಿಯಂತ್ರಿತ ಸಂಸ್ಥೆಗಳ ಸ್ಕೀಮುಗಳ ಆಮಿಷಕ್ಕೆ ಒಳಗಾಗುವ ಮೊದಲು ತಕ್ಕ ಜಾಗರೂಕತೆ ವಹಿಸಬೇಕು. ಅಂತಹ ಸ್ಕೀಮುಗಳು ವಂಚನೆಯಿಂದ ಕೂಡಿರಬಹುದು ಅಥವಾ ಅದರ ಪ್ರವರ್ತಕರು ನಿಮ್ಮ ಶ್ರಮದ ಹಣವನ್ನು ಪಡೆದು ಮಾಯವಾಗಬಹುದು.

## ಸಚೇತ್ ಪೋರ್ಟಲ್

ಯಾವುದೇ ಸಂಸ್ಥೆ ಯಾವುದೇ ಸ್ಕೀಮಿನಡಿಯಲ್ಲಿ ಸಂಗ್ರಹಿಸಿದ ಹಣ ಅಥವಾ ಠೇವಣಿ ಮರುಪಾವತಿಯಲ್ಲಿ ಲೋಪ ಮಾಡಿರುವ ಬಗ್ಗೆ ಮಾಹಿತಿ ಅಥವಾ ದೂರನ್ನು ದಾಖಲಿಸಲು www.sachet.rbi.org.in ಅನ್ನು ಸಂಪರ್ಕಿಸಿ .

## ಬ್ಯಾಂಕ್ ಠೇವಣಿಗಳು ಸುರಕ್ಷಿತವೆ?

ಬ್ಯಾಂಕುಗಳು ಆರ್‌ಬಿಐ ನ ನಿಯಂತ್ರಣ ಮತ್ತು ನಿಗಾ ದಲ್ಲಿರುವುದರಿಂದ ಬ್ಯಾಂಕ್ ಗಳಲ್ಲಿರುವ ಠೇವಣಿಗಳು ಸುರಕ್ಷಿತವಾಗಿವೆ ಮತ್ತು ಬ್ಯಾಂಕಿಂಗ್ ಲೋಕಪಾಲ ಸ್ಕೀಮಿನ ಮೂಲಕ ಅಹವಾಲು ಪರಿಹಾರದ ವ್ಯವಸ್ಥೆಯಿದೆ.

## ಠೇವಣಿ ಖಾತರಿ

ಪ್ರತಿ ಬ್ಯಾಂಕಿನ ಪ್ರತಿ ಗ್ರಾಹಕನ ₹1ಲಕ್ಷದ ವರೆಗಿನ ಠೇವಣಿಯು ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮ(DICGC)ದಿಂದ ಖಾತರಿಯಾಗಿದೆ.

ಹಣಕಾಸು ಸಾಕ್ಷರತೆ • ಅಭಿವೃದ್ಧಿಯತ್ತ ನಡಿಗೆ

ಸಂಭಾವ್ಯ ನಷ್ಟ ಮತ್ತು ಪ್ರತಿಫಲ

ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ
ಭಾರತೀಯ ರಿಸರ್ವ್ ಬ್ಯಾಂಕ್
www.rbi.org.in